**<u>ಅಸಲು ದಾವಾ ಸಂಖ್ಯೆ- 89/2020</u>** **ಪಿ.ಡಬ್ಲ್ಯೂ:- 1**

ದಿನಾಂಕಃ 11-11-2024 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ಪೊಲೀಸರಿಗೆ ಕೊಟ್ಟ ದೂರಿನ ಪ್ರತಿಯನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿ ಒಪ್ಪಿಕೊಂಡಿದ್ದು ಅದನ್ನು ನಿಪಿ-17 ಎಂದು ಗುರುತಿಸಲಾಯಿತು. ನಿಪಿ-17 ದಾಖಲೆಗೆ ನಾನು ಪೊಲೀಸ್ ಠಾಣೆಯಲ್ಲಿ ಹಾಜರಿದ್ದು ಸಹಿಯನ್ನು ಮಾಡಿದ್ದೇನು. ನಿಪಿ-17 ರಲ್ಲಿ ನಮೂದಾಗಿರುವ ಒಕ್ಕಣೆಗಳನ್ನು ಪೊಲೀಸರು ಬೆರಳಚ್ಚು ಮಾಡಿದ್ದಾರೆ. ನಿಪಿ-17 ದಾಖಲೆಯಲ್ಲಿ ನಮೂದಾಗಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಮ್ಮ ಯಜಮಾನರು ಹೇಳಿದ ಮೇರೆಗೆ ನಾನು ಸಹಿಯನ್ನು ಮಾಡಿದ್ದೇನೆ. ನಿಪಿ-17 ರಲ್ಲಿ 200-250 ಅಡಿಕೆ ಮರಗಳು ಪ್ರತಿವಾದಿಗೆ ಸೇರಿದ್ದು ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನಿಪಿ-17 ದಾಖಲೆಯಲ್ಲಿ ಭೂ ಮಾಪನ ಅಧಿಕಾರಿಗಳು ಹದ್ದುಬಸ್ತು ಮಾಡಿ 200-250 ಅಡಿಕೆ ಮರಗಳು ಪ್ರತಿವಾದಿಗೆ ಸೇರಿದ್ದು ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ 5 ಗುಂಟೆ ಜಮೀನನ್ನು ಒತ್ತುವರಿ ಮಾಡಿ 200-250 ಅಡಿಕೆ ಮರಗಳ ಸಸಿಗಳನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ. ನಿಪಿ-17 ರ ದೂರನ್ನು ಕೊಟ್ಟಿದ್ದು ದಿಃ 16-03-2020 ಎಂದರೆ ಸರಿ. ಈ ದಾವೆಯನ್ನು ದಿಃ 11-06-2020 ರಂದು ಸಲ್ಲಿಸಿದ್ದೇವೆ ಎಂದರೆ ಸರಿ. ನಾವು ಪೊಲೀಸರಿಗೆ ದೂರನ್ನು ಕೊಟ್ಟ 3 ತಿಂಗಳ ನಂತರ ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ನಿಪಿ-17 ದಾಖಲೆಯಲ್ಲಿ ನಾವು ಈ ಮೊದಲೇ ದಾವೆಯನ್ನು ಸಲ್ಲಿಸಿದ್ದೇವೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ನಿಪಿ-1 ದಾಖಲೆಯ 2 ನೇ ಪುಟದಲ್ಲಿ ತನ್ನ ಸಹಿಯನ್ನು ನೋಡಿ ಒಪ್ಪಿಕೊಂಡಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ದಾಖಲೆಯಲ್ಲಿ ನಿಪಿ-1(ಎ) ಸಹಿಯನ್ನು ಹೊರತುಪಡಿಸಿ ಬೇರೆ ಕಡೆ ನನ್ನ ಸಹಿ ಇರುವುದಿಲ್ಲ. ನಿಪಿ-1 ದಾಖಲೆಯಲ್ಲಿ ಹೆಬ್ಬೆಟ್ಟಿನ ಗುರುತಿಗೆ ಎಂ.ಕುಸುಮ್ಮ ಎಂದು ಬರೆದಿದ್ದಾರೆ ಎಂದರೆ

ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ-1(ಎ) ನನ್ನ ಸಹಿ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ನನ್ನ ಸಹಿ ಕುಸುಮ ಎಂದು ಸಹಿ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಯಾವುದೇ ದಾಖಲೆಗಳಲ್ಲಿ ಕುಸುಮ ಎಂದು ಸಹಿ ಮಾಡುತ್ತೇನೆ ವಿನಹ ಕುಸುಮ್ಮ ಎಂದು ಸಹಿ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ದಾಖಲೆಯಲ್ಲಿ ನಾನು ಕುಸುಮ ಎಂದು ಸಹಿಯನ್ನು ಮಾಡಿದ್ದೇನೆ ಆದರೆ ಯಾರೋ ಮ ಕ್ಕೆ ಮ ಒತ್ತು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-1 ದಾಖಲೆ ನನ್ನ ಬಳಿ ಇತ್ತು. ನಿಪಿ-1 ದಾಖಲೆಯೂ ನೋಂದಣಿಯಾದ ದಿನದಿಂದಲೂ ಈ ದಾವೆಯನ್ನು ಸಲ್ಲಿಸುವವರೆಗೂ ನನ್ನ ಬಳಿ ಇತ್ತು. ನಿಪಿ-1 ದಾಖಲೆಯು ಕ್ರಯ ಆದಗಿನಿಂದಲೂ ನನ್ನ ಬಳಿ ಇತ್ತು ಎಂದರೆ ಸರಿ. ನಿಪಿ-1 ದಾಖಲೆಯು ನನ್ನ ಬಳಿ ಇದುದ್ದರಿಂದ ನನ್ನ ಹೆಸರಿಗೆ ಮ ಕ್ಕೆ ಮ ಒತ್ತನ್ನು ಯಾರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ ಪ್ರತಿವಾದಿಯ ಜಮೀನು, ಉತ್ತರಕ್ಕೆ ಓಣಿ, ದಕ್ಷಿಣಕ್ಕೆ ನಾಗೇಶ್ ರಾವ್ ರವರ ಜಮೀನು. ಅಡಿಕೆ ಸಸಿಗಳನ್ನು ದಾವಾ ಆಸ್ತಿಯಲ್ಲಿ ಹಾಕಿದ ನಂತರ ಹದ್ದು ಬಸ್ತನ್ನು ಮಾಡಿಸಿದ್ದೆವು. ನಿಪಿ-11 ಛಾಯಾಚಿತ್ರದಲ್ಲಿ ಭೂ ಮಾಪನ ಇಲಾಖೆಯವರು ಹದ್ದುಬಸ್ತು ಮಾಡಿ ಹಾಕಿದ ಕಲ್ಲನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಹದ್ದುಬಸ್ತು ಕಲ್ಲು ಮತ್ತು ಪ್ರತಿವಾದಿಯ ಜಮೀನಿನ ನಡುವೆ 4 ಸಾಲು ಅಡಿಕೆ ಮರಗಳು ಬರುತ್ತವೆ. ಸದರಿ 4 ಸಾಲು ಅಡಿಕೆ ಮರಗಳು ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.